ಶ್ರೀ ಮಳ್ಳೂರು ಆನಂದರಾವ್,—ಸ್ವಾಮಿ, ಶ್ರೀಮತಿ ಪ್ರಮೀಳಾ ಅವರು ಮಾಡಿರತಕ್ಕ ಭಾಷಣ ಮತ್ತು ಇಬ್ರಾಹಿಂರವರು ಮಾಡಿರತಕ್ಕ ಭಾಷಣ ತಾವು ನೋಡಿದರೆ ಯಾರು ತಪ್ಪಿತಸ್ಥರು ಅಂತ ಕಾಣುತ್ತೆ.

ಅಧ್ಯಕ್ಷರು.—ಈ ವಿಚಾರ ಅಷ್ಟಕ್ಕೆ ಬಿಡಿ : ಮುಖ್ಯಮಂತ್ರಿಗಳು ಬಂದಿದ್ದಾರೆ, ಉತ್ತರ ಕೊಡುತ್ತಾರೆ.

re : Reservation of posts in the Department of Public Libraries

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ಕೇಂದ್ರ ಗ್ರಂಥಾಲಯದ ಬಗ್ಗೆ ಶಿಕ್ಷಣ ಮಂತ್ರಿಗಳು ಹೇಳಿಕೆಕೊಡಬೇಕಾಗಿತ್ತು, ಅವರ ಹೇಳಿಕೆ ಪ್ರೆಸ್‌ನಿಗಳು ಬಂದಿವೆ, ಸುಮಾರು ೧೪ ಪುಟ ಇದೆ. ಮಾನ್ಯ ಸಚಿವರು ಅವರ ಹೇಳಿಕೆಯನ್ನು ಸದನದಲ್ಲಿ ಮಂಡಿಸಲಿ, ವಿಚಾರವನ್ನು ಕೂಲಂಕುಷವಾಗಿ ನೋಡಿ ಅನಂತರ ಚರ್ಚೆಗೆ ತೆಗೆದುಕೊಳ್ಳೋಣ.

ಅಧ್ಯಕ್ಷರು.—ಇದಕ್ಕಾಗಿ ಒಂದು ದಿವಸ ಒಂದು ಒಂದೂವರೆ ಗಂಟೆಕಾಲ ಇಟ್ಟು ಚರ್ಚೆ ಮಾಡುವುದಕ್ಕೆ ವ್ಯವಸ್ಥೆ ಮಾಡೋಣ. ಮಂತ್ರಿಗಳು ವಿವರಣೆ ಕೊಡ ಬೇಕಾಗುತ್ತದೆ.

SRI G. B. SHANKAR RAO.—Sir. I am ready with a statement regarding the Library Department, if permission is given, I am prepared to make my statement.

SRI MALLUR ANAND RAO.—As the statement is very big and contains 15 to 20 pages. let the Hon. Minister place it on the Table, and it will become the property of the House.

SRI G. B. SHANKAR RAO.—Sir, I place the statement on the table regarding the Dept. of Public Libraries.*

ಅಧ್ಯಕ್ಷರು.—ಬಹಳಷ್ಟು ಮಸೂದೆಗಳು ಇವೆ, ಇದು ಅತ್ಯಾವಶ್ಯಕವಾಗಿ ಮುಗಿಯಬೇಕು.

ಶ್ರೀ ಜಿ. ಬಿ. ಶಂಕರರಾವ್.—ನಾನು ಉತ್ತರಕೊಡುವುದಕ್ಕೆ ಸಿದ್ಧನಿದ್ದೇನೆ. ಮಾನ್ಯ ಸದಸ್ಯರು ಸಮಯಬೇಕಾಗಿದ್ದರೆ ಬೇರೆ ದಿವಸ ತೆಗೆದುಕೊಳ್ಳಿ.

ಶ್ರೀಮತಿ ಎಸ್. ಪ್ರಮೀಳಾ.—ಸ್ವಾಮಿ, ಜಗಜೀವನರಾಂ ವಿದ್ಯಾರ್ಥಿನಿಲಯದಲ್ಲಿ ಓದತಕ್ಕ ನಾಲ್ಕು ಜನ ಹೆಣ್ಣುಮಕ್ಕಳನ್ನು ವಿದ್ಯಾರ್ಥಿನಿಲಯದಿಂದ ಓಡಿಸುವ ಬೆದರಿಕೆ ಹಾಕಿದ್ದಾರೆ.

ಅಧ್ಯಕ್ಷರು.—ಕಳುಹಿಸಿಕೊಡಿ ನಾನು ವಿಚಾರಮಾಡುತ್ತೇನೆ.

ಶ್ರೀ ಎಂ. ವಿ. ರಾಜಶೇಖರನ್.—ಸ್ವಾಮಿ, ರಾಜ್ಯದಲ್ಲಿ ವಿದ್ಯುಚ್ಛಕ್ತಿ ಕೊರತೆ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶ ಕೊಡಬೇಕೆಂದು ತಮ್ಮಲ್ಲಿ ಹೇಳಿದ್ದೆ, ಇವತ್ತು ೩೦-೪೦ ಸಾವಿರ ಜನ ಕೆಲಸವಿಲ್ಲದೆ ಇರತಕ್ಕ ಪರಿಸ್ಥಿತಿ ಬಂದಿದೆ. ಇದಕ್ಕೆ ಕಾರಣ ಸರ್ಕಾರದವರು ಸೂಕ್ತಕಾಲದಲ್ಲಿ ಕ್ರಮ ತೆಗೆದುಕೊಳ್ಳದೇ ಇರತಕ್ಕದ್ದು. ಸರ್ಕಾರ ನಮ್ಮ ನೆರೆಹೊರೆಯ ರಾಜ್ಯಗಳಿಂದ ವಿದ್ಯುಚ್ಛಕ್ತಿಯನ್ನು ಪಡೆಯುವುದರಲ್ಲಿ ಎಷ್ಟರಮಟ್ಟಿಗೆ ಪ್ರಯತ್ನ ಮಾಡಿದೆಯೋ ಗೊತ್ತಿಲ್ಲ. ಈ ವಿಚಾರದಲ್ಲಿ ಸರ್ಕಾರ ಸ್ಪಷ್ಟವಾದ ಹೇಳಿಕೆಯನ್ನು ಸಭೆಯ ಮುಂದಿಡಬೇಕು. ಎರಡನೆಯದು, ರೈತರ ಸಮಸ್ಯೆಗಳನ್ನು ಬಗೆಹರಿಸಲು ಒಂದು ಸಮಿತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಿದ್ದರು, ಆ ಕೆಲಸ ಎಲ್ಲಿಗೆ ಬಂದಿದೆಯೆಂಬುದನ್ನು ಕೂಡ ತಿಳಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

---

* Copy placed in the Karnataka Legislature Library *Vide* No. 14 dated 3rd May 1980.

MR. SPEAKER.—I request the Hon. Minister for Transport to convey the feelings of the hon. Members to the Hon Chief Minister.

ಶ್ರೀ ಟಿ. ಚೌಡಯ್ಯ.—ಸ್ವಾಮಿ, ಚಿತ್ರದುರ್ಗ ನಗರದಲ್ಲಿ ನೀರಿನ ತೊಂದರೆ ಬಗ್ಗೆ ಗಮನ ಸೆಳೆಯುವ ಸೂಚನೆ ಕಳುಹಿಸಿ ಒಂದು ವಾರ ಆಯಿತು, ಇದುವರೆವಿಗೂ ಬಂದಿಲ್ಲ.

ಅಧ್ಯಕ್ಷರು.—ಬೇಗ ಹಾಕಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಬೆಂಗಳೂರಿನಲ್ಲಿ ಆದಂತಹ ಸಕ್ಕರೆ ಕಲಬೆರಕೆ ಮಂಡ್ಯಾದಲ್ಲೂ ಆಗಿದೆ. ಇದರ ಬಗ್ಗೆ ಮುಖ್ಯಮಂತ್ರಿಗಳು ಕಳೆದ ಮೂರು ದಿವಸದಿಂದ ಹೇಳಿಕೆ ಕೊಡುತ್ತೇನೆಂದು ಹೇಳುತ್ತಲೇ ಇದ್ದಾರೆ. ಇನ್ನೂ ಕೊಟ್ಟಿಲ್ಲ.

ಅಧ್ಯಕ್ಷರು.—ಮುಖ್ಯಮಂತ್ರಿಗಳಿಗೆ ಹೇಳಿಕಳುಹಿಸಿದ್ದೇನೆ. ಅವರು ಬಂದಾಗ ಏನು ಹೇಳುತ್ತಾರೋ ನೋಡೋಣ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ದೇವೇಗೌಡರು ಸರ್ಕಾರಿ ಸ್ಕೂಲ್ ಒಂದನ್ನು ನಾನೇ ತೆಗೆದು ಕೊಂಡು ಸಾವಿರಾರು ರೂಪಾಯಿಗಳನ್ನು ನುಂಗಿದ್ದಾರೆಂದು ಹೇಳಿದರು, ಬಹುಶಃ ಯಾರೋ ಅವರಿಗೆ ಮಿಸ್‌ಗೈಡ್ ಮಾಡಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಶಾಂತಿ ವರ್ಧಕ ವಿದ್ಯಾ ಸಂಸ್ಥೆಯನ್ನು ಬಹಳಷ್ಟು ವರ್ಷಗಳ ಹಿಂದೆಯೇ ಕಟ್ಟಿದ್ದರು. ಶ್ರೀಮಾನ್ ಡಿ. ದೇವರಾಜ ಅರಸ್ ಅವರು ಅಧಿಕಾರದಲ್ಲಿದ್ದಾಗ ೮ ವರ್ಷಗಳ ಕಾಲ ಛೇರ್ಮನ್ ಆಗಿದ್ದೆ. ಅದಕ್ಕೆ ಸಂಬಂಧಪಟ್ಟ ಎಲ್ಲಾ ಕಾಗದಪತ್ರಗಳು ಇವೆ, ಅವುಗಳನ್ನು ಬೇಕಾದರೆ ಒದಗಿಸುತ್ತೇನೆ.

೧೨-೫೦ ಪಿ. ಎಂ.

ಶ್ರೀ ಡಿ. ಜಯದೇವರಾಜ ಅರಸ್.—ಅಧ್ಯಕ್ಷರೆ, ನಿನ್ನೆ ಹೇಳಿಕೆಯ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಕೊಡುತ್ತೇವೆಂದು ಹೇಳಿದ್ದಾರೆ, ಅದು ಕ್ಲಾರಿಫೈ ಮಾಡಿದರೆ ಸರಿ ಹೋಗುತ್ತದೆ. ಇಲ್ಲದೇ ಹೋದರೆ ಸರಿಹೋಗುವುದಿಲ್ಲ.

ಶ್ರೀ ಎಂ. ವಿ. ರಾಜಶೇಖರನ್.—ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ. ನಾವು ಕೇಳಿದ ಪ್ರಶ್ನೆಗೆ ಅವರಿಂದ ಈಗ ಉತ್ತರ ಪಡೆಯಬಹುದು.

ಅಧ್ಯಕ್ಷರು.—ಅವರು ಈಗ ತಾನೇ ಬಂದಿದ್ದಾರೆ ಇನ್ನೂ ಸಾಕಷ್ಟು ಸಮಯ ಇದೆ, ಅವರು ವಿಚಾರ ಏನು ಅಂತ ತಿಳಿದುಕೊಂಡು ಹೇಳಲಿಕ್ಕೆ ಅವಕಾಶ ಕೊಡಬಾರದೆ ?

ಶ್ರೀ ಹೆಚ್. ಟಿ. ಚೌಡಯ್ಯ.—ಅಧ್ಯಕ್ಷರೆ, ಈಗಾಗಲೇ ಪಶ್ನೆರಡೂವರೆ ಗಂಟೆ ಆಗಿದೆ. ಇನು ಎಷ್ಟು ಹೊತ್ತು ಕುಳಿತುಕೊಳ್ಳಬೇಕು.

ಅಧ್ಯಕ್ಷರು.—ಮುಖ್ಯಮಂತ್ರಿಗಳು ಇಲ್ಲೇ ಇರುತ್ತಾರೆ, ಅವರು ಉತ್ತರ ಹೇಳುತ್ತಾರೆ. ಈಗ ಒಂದೆರಡು ಬಿಲ್ಲುಗಳು ಪಾಸ್ ಆಗಲಿ,

LEGISLATIVE BUSINESS

The Karnataka Village Panchayat and Local Boards (Amendment) Bill

(Discussion Continued)

† ಶ್ರೀ ವಿ. ಎಲ್. ಶಿವಪ್ಪ (ತಿಪಟೂರು).—ಸನ್ಮಾನ್ಯ ಅಧ್ಯಕ್ಷರೆ, ಈ ಕರ್ನಾಟಕ ವಿಲೇಜ್ ಪಂಚಾಯತ್ ಅಂಡ್ ಲೋಕಲ್ ಬೋರ್ಡ್ಸ್ ಅಮೆಂಡ್‌ಮೆಂಟ್ ಬಿಲ್‌ಗೆ ತಂದಿರತಕ್ಕ ಉದ್ದೇಶ ಬಹಳ ಗಹನವಾಗಿರುವಂತಾದ್ದು, ತಂದಿದ್ದೀರಿ, ಅದನ್ನು ನಾನು ಸಪೋರ್ಟ್ ಮಾಡಂತ್ತೇನೆ. ಪಂಚಾಯಿತಿಯ